# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮತ್ತಿಕೆರೆ ಉಪವಿಭಾಗದ ವಾರ್ಡ್ ಸಂಖ್ಯೆ:36 ಮತ್ತಿಕೆರೆ

ಕಛೇರಿಯಲ್ಲಿ ದಿನಾಂಕ: - -2021 ರಂದು ನಡೆದ ಮೀಟಿಂಗ್ ನಡವಳಿಗಳು

**ವಿಷಯ :** ಪಾಲಿಕೆ ಎಲ್ಲಾ ವಾರ್ಡ್‌ಗಳಲ್ಲಿ "Ward Decentralized Triage and Emergency Response (DETER) " Committee for Covid-19 Management (WDC) ರಚಿಸುವ ಕುರಿತು.

**ಉಲ್ಲೇಖ :** 1. ವಾರ್ಡ್ ಕಮಿಟಿ ನೋಡಲ್ ಅಧಿಕಾರಿಗಳನ್ನು ನೇಮಿಸಿರುವ ಕಛೇರಿ ಆದೇಶದ ಸಂಖ್ಯೆ ಬಿ12(5)ಪಿ.ಆರ್/35/20-21, ದಿನಾಂಕ : 16.04.2021

2. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ನಂ.RD 158 TNR 2020, ದಿನಾಂಕ :07-05-2021
3. ಈ ಕಛೇರಿಯ ಸಭಾ ಸೂಚನೆ ಪತ್ರದ ದಿನಾಂಕ :11-08-2021

---

ಉಲ್ಲೇಖ (1)ರ ಸಭಾ ಸೂಚನಾ ಪತ್ರದ ಅನುಸಾರ ಉಲ್ಲೇಖ (2) ರ ಆದೇಶದ ಅಂಶಗಳನ್ನು ಪರಿಶೀಲಿಸಲು ದಿನಾಂಕ:7-10-2021ರಂದು ಮತ್ತಿಕೆರೆ ವಾರ್ಡ್ ನಂ.36ರ ಕಾರ್ಯಾಲಯದಲ್ಲಿ ವಾರ್ಡ್ ಕಮಿಟಿ ಸಮಿತಿ ಸಭೆಯನ್ನು ಉಲ್ಲೇಖ ಪತ್ರ (3) ರಂತೆ ಬೆಳಗ್ಗೆ 11-30 ಗಂಟೆಗೆ ಕರೆಯಲಾಗಿದ್ದು, ಸದರಿ ಸಭೆಯ ನಡವಳಿಗಳು.

ಸದಸ್ಯರು ಕಾರ್ಯದರ್ಶಿಗಳು ಕಮಿಟಿ ಹಾಗೂ ಸಹಾಯಕ ಅಭಿಯಂತರರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿದರು.

ಶ್ರೀ ಜೆ.ಬಿ. ಶ್ರೀಧರ್ ಮೂರ್ತಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ, ವಾರ್ಡ್ ಸಂಖ್ಯೆ:36ರ ವಾರ್ಡ್ ಕಮಿಟಿ ರವರು ಮಾತನಾಡುತ್ತಾ, ಸಭೆಯನ್ನು ಪ್ರಾರಂಭಿಸಲಾಗಿತ್ತು, ಉಲ್ಲೇಖ (2) ರ ಆದೇಶವನ್ನು ವಿವರಿಸುತ್ತಾ ವಾರ್ಡ್ ನಂ.36ರಲ್ಲಿ "Ward Decentralized Triage and Emergency Response (DETER)" Committee for Covid-19 Management (WDC) ಯ ಸಮಿತಿ ರಚನೆ ವಾರ್ಡ್ ಮಟ್ಟದ ಕೋವಿಡ್ ನಿರ್ವಹಣೆ WDC (ವಾರ್ಡ್ ತಡೆ ಸಮಿತಿ) ವಿಕೇಂದ್ರೀಕೃತ ಚಿಕಿತ್ಸೆಯ ಸರದಿ ನಿರ್ಧಾರ ಮತ್ತು ತುರ್ತು ಪ್ರತಿಕ್ರಿಯೆ ಕೇಂದ್ರ ರಚನೆ, ಸ್ವರೂಪ, ಕಾರ್ಯವಿಧಾನ, ಅಗತ್ಯತೆ ಹಾಗೂ ಕೋವಿಡ್-19 ರ ನಿಯಂತ್ರಣ ಹಾಗೂ ಚಿಕಿತ್ಸೆ ಸಂಬಂಧ ತೆಗೆದುಕೊಳ್ಳಬೇಕಾದ ಕಾರ್ಯಗಳ ಬಗ್ಗೆ ಸಭೆಗೆ ವಿವರವಾಗಿ ತಿಳಿಸಿದರು.

17. ಹಿಂದಿನ ಸಭೆಗಳಲ್ಲಿ ನಿರ್ಣಯಗಳ ಅನುಪಾಲನೆ ಹಾಗೂ ಸಾರ್ವಜನಿಕರಿಗೆ ಸಮರ್ಪಕ ಸೇವೆ ನೀಡುವ ಬಗ್ಗೆ ಹಿಂದಿನ ಸಭೆಗಳಲ್ಲಿ ತೆಗೆದುಕೊಂಡ ನಿರ್ಧಾರಗಳಿಗೆ ಅನುಪಾಲನೆ ಮತ್ತು ವಾರ್ಡ್‌ನಲ್ಲಿ ಸಾರ್ವಜನಿಕರ ದಿನನಿತ್ಯ ಮೂಲಭೂತ ಸೌಕರ್ಯಗಳು ಹಾಗೂ ಸೇವೆ ಒದಗಿಸುವ ಸಂಬಂಧ ನಿರಂತರವಾಗಿ ಕ್ರಮವಹಿಸಲು ಹಾಜರಿದ್ದ ಎಲ್ಲಾ ಬಿ.ಬಿ.ಎಂ.ಪಿ. ಅಧಿಕಾರಿ ಸಿಬ್ಬಂದಿಯವರಿಗೆ ತಿಳಿಸಿದರು.

ಮು.ತಿ.ನೋ

Scanned with CamScanner

2. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ ಕಂದಾಯ ಇಲಾಖೆ ರವರಿಗೆ ವಾರ್ಡ್‌ಗಳ ವ್ಯಾಪ್ತಿಯಲ್ಲಿ ವಾಣಿಜ್ಯ ತೆರಿಗೆ ಪಾವತಿ ಮಾಡಿರುವ ಬಗ್ಗೆ ಅಧ್ಯಕ್ಷರು ವಿವರವಾದ ವರದಿಯನ್ನು ಕೋರಿದರು. ಹಾಗೂ ಸಹ ಕಂದಾಯ ಅಧಿಕಾರಿರವರು ಇದುವರೆವಿಗೂ ಯಾವುದೇ ಸಭೆಗೆ ಹಾಜರಾಗಿರದೇ ಇರುವುದರಿಂದ ಮುಂದಿನ ಸಭೆಗೆ ಹಾಜರಾಗುವಂತೆ ಸೂಚಿಸಿದರು.

3. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ ಬೆಸ್ಕಾಂ ಇಲಾಖೆಯಿಂದ ಕಾಮಗಾರಿಯು ಅರ್ಧಕ್ಕೆ ನಿಂತಿದ್ದು, ಕಾಮಗಾರಿಗೆ ಅವಶ್ಯವಿರುವ ಪೈಪುಗಳೆಲ್ಲಾ ರಸ್ತೆಗಳಲ್ಲಿಯೇ ಬಿದ್ದಿರುತ್ತದೆ. ಇದರಿಂದ ಸಾರ್ವಜನಿಕರ ಹಾಗೂ ವಾಹನಗಳ ಓಡಾಟಕ್ಕೆ ತೊಂದರೆಯಾಗುತ್ತಿರುತ್ತದೆ. ಆದ್ದರಿಂದ ಕೂಡಲೇ ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ತಿಳಿಸಿದರು.
ಸುಬ್ಬಯ್ಯ ಆಸ್ಪತ್ರೆ ಹತ್ತಿರವಿರುವ ಟ್ರಾನ್ಸ್‌ಫಾರಂ ರಸ್ತೆಯಲ್ಲಿಯೇ ಇದ್ದು ಇದನ್ನು ಹಿಂದಕ್ಕೆ ಸ್ಥಳಾಂತರಿಸುವ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು.
ಅಶ್ವಿನಿ ಶಾಲೆ ರಸ್ತೆಯಲ್ಲಿರುವ ಟ್ರಾನ್ಸ್‌ಫಾರಂನಲ್ಲಿ ಪವರ್ fluctuation ಆಗುತ್ತಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು.
15ನೇ ಮುಖ್ಯರಸ್ತೆ, ಸುಬ್ಬಯ್ಯ ಆಸ್ಪತ್ರೆ ಹತ್ತಿರ ಆರ್.ಎಂ.ವಿ. ಬಾಕ್ಸ್ ರಸ್ತೆ ಮಧ್ಯದಲ್ಲಿರುವುದರಿಂದ ಇದನ್ನು ಸ್ಥಳಾಂತರಿಸುವ ಬಗ್ಗೆ ಕ್ರಮ ಕೈಗೊಳ್ಳಲು ಅಧ್ಯಕ್ಷರು ಸೂಚಿಸಿದರು.

4. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯ ಆರೋಗ್ಯಾ ವೈದ್ಯಾಧಿಕಾರಿಗಳು ಮಾತನಾಡಿ ಈ ಕೆಳಕಂಡಂತೆ ಕೋವಿಡ್-19ರ ವರದಿಯನ್ನು ನೀಡಿರುತ್ತಾರೆ.

| | |
|---|---|
| H.I | – |
| AC | – 06 |
| Vaccination | - 38670 |

ಮತ್ತಿಕೆರೆ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಸಾರ್ವಜನಿಕರ ಆರೋಗಯ ಹಿತದೃಷ್ಟಿಯಿಂದ ಸಂಜೆ 4-00ಗಂಟೆಗೆ ಯೋಗ ತರಗತಿಗಳನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರು.

5. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ, ಜಿ.ಪಿ.ಎಸ್. ಡ್ರೈವ್ಸ್ ಅಳವಡಿಸಿ ಕೆಲಸ ನಿರ್ವಹಿಸುತ್ತಿರುವುದರಲ್ಲಿ ಮತ್ತಿಕೆರೆ ಮೊದಲನೇ ಸ್ಥಾನದಲ್ಲಿದೆ. ಮತ್ತಿಕೆರೆ ವ್ಯಾಪ್ತಿಯಲ್ಲಿ ಕಸ ವಿಂಗಡನೆ ಕಾರ್ಯವನ್ನು ಅಭಿವೃದ್ಧಿಪಡಿಸಲಾಗಿದೆ. ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

6. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ 1ನೇ ಸಿ ಕ್ರಾಸ್‌ನಲ್ಲಿರುವ ಮರಗಳು ಹೆಚ್ಚಾಗಿ ಬೆಳೆದಿದ್ದು, ಇದರಿಂದ ಸಾರ್ವಜನಿಕರ ಹಾಗೂ ವಾಹನ ಸವಾರರ ಓಡಾಟಕ್ಕೆ ತೊಂದರೆಯಾಗುತ್ತಿರುತ್ತದೆ. ಆದ್ದರಿಂದ ಕೂಡಲೇ ಈ ಮರಗಳನ್ನು ಟ್ರಿಮಿಂಗ್ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಅಧ್ಯಕ್ಷರು ಸೂಚಿಸಿದರು:

7. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ ಅಶ್ವಿನಿ ಶಾಲೆಯ ಸುತ್ತಮುತ್ತ ಅನೈತಿಕ ಚಟುವಟಿಕೆಗಳು ನಡೆಯುತ್ತಿದ್ದು, ಈ ಬಗ್ಗೆ ಪೊಲೀಸ್ ಇಲಾಖೆಯಿಂದ ಕ್ರಮ ಕೈಗೊಳ್ಳುವಂತೆ ಅಧ್ಯಕ್ಷರು ಸಭೆಯಲ್ಲಿ ತಿಳಿಸಿರುತ್ತಾರೆ.

ಸಂಜೀವಪ್ಪ ಕಾಲೋನಿಯಲ್ಲಿ ಲೌಡ್ ಸ್ಪೀಕರ್ ಅಳವಡಿಸುತ್ತಿದ್ದು, ಇದರಿಂದ ಇಲ್ಲಿ ವಾಸ ಮಾಡುತ್ತಿರುವ ಸ್ಥಳೀಯ ನಿವಾಸಿಗಳಿಗೆ ತೊಂದರೆವುಂಟಾಗುತ್ತಿರುತ್ತದೆ. ಆದ್ದರಿಂದ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತಿಳಿಸಿದರು.

Scanned with CamScanner

8. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ ಸಿ.ಸಿ. ಕ್ಯಾಮರ ಅಳವಡಿಸುವ ಬಗ್ಗೆ ಕ್ರಮ ವಹಿಸುವಂತೆ ಕಾಮಗಾರಿ ಇಲಾಖೆ ರವರಿಗೆ ತಿಳಿಸಿದರು.
ರಾಜಶೇಖರ್ ರಸ್ತೆಯಲ್ಲಿ ಫಾಟ್‌ಹೋಲ್‌ಗಳು ಬಿದ್ದಿದ್ದು, ಇವುಗಳನ್ನು ಮುಚ್ಚಲು ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಮತ್ತಿಕೆರೆ ಓಂ ಶಕ್ತಿ ರಸ್ತೆಯಲ್ಲಿ ಮಾರ್ಕೆಟ್ ನಿರ್ಮಿಸಿಕೊಡುವಂತೆ ಸದಸ್ಯರು ಅಧ್ಯಕ್ಷರಲ್ಲಿ ಕೋರಲಾಗಿ, ಅಧ್ಯಕ್ಷರು ಈ ಬಗ್ಗೆ ಸಂಬಂಧಪಟ್ಟ ಇಲಾಖೆರವರು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.
ಮತ್ತಿಕೆರೆ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗಗಳಲ್ಲಿರುವ ಅನುಪಯುಕ್ತ ವಸ್ತುಗಳನ್ನು ತೆರವುಗೊಳಿಸಿ ಸಾರ್ವಜನಿಕರ ಓಡಾಡಕ್ಕೆ ಅನುಕೂಲ ಮಾಡಿಕೊಡುವಂತೆ ಸಭೆಯಲ್ಲಿ ಸೂಚಿಸಿದರು.

9. ಮತ್ತಿಕೆರೆ ವ್ಯಾಪ್ತಿಯಲ್ಲಿ ಬಿಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಕಾಮಗಾರಿ ನಿರ್ವಹಿಸಿದ್ದು, ಮ್ಯಾನ್‌ಹೋಲ್‌ಗಳನ್ನು ಸಮಪರ್ಕವಾಗಿ ಜೋಡಿಸದೇ ರಸ್ತೆಯ ಮೇಲ್ಮೈ ಮೇಲೆ ಇದ್ದು ಇದರಿಂದ ವಾಹನ ಸವಾರರ ಓಡಾಟಕ್ಕೆ ತೊಂದರೆವುಂಟಾಗಿರುತ್ತದೆ ಎಂದು ವಾರ್ಡ್ ಕಮಿಟಿ ಸದಸ್ಯರಾದ ಶ್ರೀ ವೆಂಕಟಾಚಲ ರವರು ತಿಳಿಸಿದರು, ಅಧ್ಯಕ್ಷರು ಈ ಬಗ್ಗೆ ಮಾತನಾಡಿ ಅಧಿಕಾರಿಗಳು ಕ್ರಮವಹಿಸುವಂತೆ ಸೂಚಿಸಿದರು.

10. ಮತ್ತಿಕೆರೆ ವ್ಯಾಪ್ತಿಯಲ್ಲಿರುವ ಮೇಲ್ಸೇತುವೆ ಮೇಲೆ ಇರುವ ಅನುಪಯುಕ್ತ ವಸ್ತುಗಳನ್ನು, ಕಸವನ್ನು ತೆರವುಗೊಳಿಸಲು ಸಂಬಂಧಪಟ್ಟ ಇಲಾಖೆರವರು ಕ್ರಮ ವಹಿಸುವಂತೆ ಅಧ್ಯಕ್ಷರು ಸೂಚಿಸಿದರು.

ಈ ಎಲ್ಲಾ ಕ್ರಮಗಳನ್ನು ತ್ವರಿತವಾಗಿ, ಆದ್ಯತೆ ಮೇಲೆ ಕೈಗೊಂಡು ಮುಂಬರುವ ಸಭೆಯಲ್ಲಿ ಮಂಡಿಸಲು ಸೂಚಿಸಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ,

Sushma.N
(ಸುಷ್ಮಾ)
ಸದಸ್ಯ ಕಾರ್ಯದರ್ಶಿ,
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್ ಸಂಖ್ಯೆ:36, ಮತ್ತಿಕೆರೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(ಜೆ.ಬಿ.ಶ್ರೀಧರ್ ಮೂರ್ತಿ)).
ಅಧ್ಯಕ್ಷರು,
ವಾರ್ಡ್ ಸಂಖ್ಯೆ:36, ಮತ್ತಿಕೆರೆ.

Scanned with CamScanner